1525(1760) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನಡೆಯುತ್ತಿರುವ ಸಂತೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು:

ಆ) ಈ ಸಂತೆಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ:

ಇ) ಹಳೆಯ ಸಂತೆಗಳ ಬದಲಿಗೆ ಹೊಸ ಮಾದರಿಯ ಸಂತೆಗಳಾಗಿ ಮಾರ್ಪಡಿಸಲು ಸರ್ಕಾರ ಯೋಜನೆ ರೂಪಿಸುತ್ತಿದೆಯೇ (ವಿವರಗಳನ್ನು ಒದಗಿಸುವುದು)?

ಶ್ರೀ ಪ್ರಕಾಶ್ ಬಾ.ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ಅಂದಾಜು 958 ಸಂತೆಗಳು ಇರುತ್ತವೆ. ಜಿಲ್ಲಾವಾರು ಮಾಹಿತಿ ತಃಖ್ತೆ–1ರಲ್ಲಿ ಲಗತ್ತಿಸಿದೆ.

ಆ) ಈ ಸಂತೆಗಳ ಅಭಿವೃದ್ಧಿಪಡಿಸಲು ಆರ್.ಐ.ಡಿ.ಎಫ್ ಯೋಜನೆಯಡಿ ಕ್ರಮ ಕೈಗೊಂಡಿದೆ.

ಇ) ಆರ್.ಐ.ಡಿ.ಎಫ್. VI ರ ಯೋಜನೆಯಡಿ 13 ಗ್ರಾಮೀಣ ಸಂತೆಗಳಲ್ಲಿ ಕಾಮಗಾರಿಗಳನ್ನು ಒಟ್ಟು ರೂ.242.90 ಲಕ್ಷಗಳಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದ್ದು, ಆರ್.ಐ.ಡಿ.ಎಫ್. VII ಯೋಜನೆಯಡಿಯಲ್ಲಿ 16 ಗ್ರಾಮೀಣ ಸಂತೆಗಳಲ್ಲಿ ಕಾಮಗಾರಿಗಳನ್ನು ಒಟ್ಟು ರೂ.200.94 ಲಕ್ಷಗಳಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದ್ದು, ಆರ್.ಐ.ಡಿ.ಎಫ್. ಖಿಫಿರ ಯೋಜನೆ ಯಡಿಯಲ್ಲಿ ರಾಜ್ಯದ ವಿವಿಧ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ಬರುವ ಒಟ್ಟಾರೆ 193 ಗ್ರಾಮೀಣ ಸಂತೆಗಳನ್ನು ರೂ.2342.00 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಆರ್.ಐ.ಡಿ.ಎಫ್. ಫಿರ ಯೋಜನೆಯಡಿಯಲ್ಲಿ ಸುಮಾರು 74 ಗ್ರಾಮೀಣ ಸಂತೆಗಳನ್ನು ರೂ.1000.00 ಲಕ್ಷಗಳಲ್ಲಿ ಕೈಗೊಂಡ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

**ತಃಖ್ತೆ–1**

**ಕರ್ನಾಟಕ ರಾಜ್ಯದಲ್ಲಿರುವ ಸಂತೆಗಳ ಜಿಲ್ಲಾವಾರು ವಿವರ**

| ಕ್ರ.ಸಂ. | ಜಿಲ್ಲೆಗಳ ಹೆಸರು | ಸಂತೆಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 15 |
| 2 | ಬೆಂಗಳೂರು ಗ್ರಾಮಾಂತರ | 10 |
| 3 | ಚಿತ್ರದುರ್ಗ | 54 |
| 4 | ದಾವಣಗೆರೆ | 47 |
| 5 | ಕೋಲಾರ | 62 |
| 6 | ತುಮಕೂರು | 54 |
| 7 | ಶಿವಮೊಗ್ಗ | 30 |
| 8 | ಮೈಸೂರು | 10 |
| 9 | ಚಾಮರಾಜನಗರ | 3 |
| 10 | ಮಂಡ್ಯ | 30 |

| | | |
|---|---|---|
| 11 | ಹಾಸನ | 41 |
| 12 | ಚಿಕ್ಕಮಗಳೂರು | 26 |
| 13 | ಕೊಡಗು | 18 |
| 14 | ದಕ್ಷಿಣಕನ್ನಡ | 13 |
| 15 | ಉಡುಪಿ | 15 |
| 16 | ಗುಲ್ಬರ್ಗಾ | 40 |
| 17 | ಬೀದರ್ | 30 |
| 18 | ಬಳ್ಳಾರಿ | 26 |
| 19 | ರಾಯಚೂರು | 40 |
| 20 | ಕೊಪ್ಪಳ | 40 |
| 21 | ಬೆಳಗಾಂ | 137 |
| 22 | ಧಾರವಾಡ | 27 |
| 23 | ಹಾವೇರಿ | 31 |
| 24 | ಗದಗ | 38 |
| 25 | ಉತ್ತರಕನ್ನಡ | 21 |
| 26 | ಬಿಜಾಪುರ | 53 |
| 27 | ಬಾಗಲಕೋಟೆ | 47 |
| | ಒಟ್ಟು | **958** |

1526(1761) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಕೃಷಿ ಮಾರಾಟ ಮಂಡಳಿಯನ್ನು ಪಬ್ಲಿಕ್ ಎಂಟರ್‌ಪ್ರೈಸಸ್ ಅಥವಾ ಲಿಮಿಟೆಡ್ ಕಂಪನಿಯ ರೂಪದಲ್ಲಿ ಮಾರ್ಪಡಿಸುವುದಕ್ಕೆ ಸರ್ಕಾರ ಆಲೋಚಿಸಿದೆಯೇ;

ಆ) ಹಾಗಿದ್ದಲ್ಲಿ ರೂಪಾಂತರಿಸಲು ಕಾರಣಗಳೇನು;

ಇ) ಸದರಿ ರೂಪಾಂತರದ ಹೊಸ ರೂಪುರೇಷೆಗಳೇನು; ಹೊಸ ಬದಲಾವಣೆಯನ್ನು ಯಾವ ಕಾಲಮಿತಿಯೊಳಗೆ ಜಾರಿಗೊಳಿಸಲಾಗುವುದು?

ಶ್ರೀ ಪ್ರಕಾಶ್ ಭಾ.ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.